

## ತಿರುಗೇಟು

ಗುಂಡ ಎಕ್ಸ್‌ಪ್ರೆಸ್ ರೈಲಿನ ಎ.ಸಿ. ಕೋಚ್‌ನಲ್ಲಿ ಒಂಟಿಯಾಗಿ ಕೂತಿದ್ದ. ಆಗ ಅದೇ ಬೋಗಿಗೆ ನುಗ್ಗಿದ ಗಯ್ಯಾಳಿಯಂತಿದ್ದ ಹೆಂಗಸೊಬ್ಬಳು ಅದೇ ಬೋಗಿಗೆ ಹತ್ತಿದಳು. ಒಳ ಬಂದು ಕುಳಿತ ಸ್ವಲ್ಪ ಹೊತ್ತಿನಲ್ಲಿ ಗುಂಡನ ಹತ್ತಿರ, 'ನಿಮ್ಮ ಹತ್ತಿರ ಇರುವ ಚಿನ್ನದ ಸರ, ಉಂಗುರ, ಐ ಪ್ಯಾಡ್, ಲ್ಯಾಪ್‌ಟಾಪ್, ಹಣ ಎಲ್ಲಾ ತಕ್ಷಣ ತೆಗದು ನನಗೆ ಕೊಡಿ. ಇಲ್ಲದಿದ್ದರೆ ನಾನು ಕೂಗಿ ಕಿರುಚಾಡಿ ನನ್ನನ್ನು ಮುಟ್ಟುವ ಪ್ರಯತ್ನ ಮಾಡಿದಿರಿ ಎಂದು ಎಲ್ಲರಿಗೂ ಹೇಳುತ್ತೇನೆ' ಎಂದಳು. ಗುಂಡ ತಬ್ಬಿಬ್ಬಾಗಿ ಸಾವರಿಸಿಕೊಂಡು ಬಿಳಿ ಹಾಳೆಯ ಮೇಲೆ ನಾನು ಹುಟ್ಟು ಕಿವುಡ ಹಾಗೂ ಮೂಕ. ಆದ್ದರಿಂದ ನೀವು ಹೇಳಿದ್ದನ್ನು ಬರೆದು ಕೊಡಿ ಎಂದು ಬರೆದ. ಆಕೆ ತಾನು ಹೇಳಿದ್ದನ್ನು ಬರೆದುಕೊಟ್ಟಳು. ಅದನ್ನು ಪಡೆದುಕೊಂಡ ಗುಂಡ, 'ಈಗ ಹೇಗೆ ಬೇಕಾದರೂ ಕೂಗಿ ಕಿರುಚಾಡಿ ಪೊಲೀಸರನ್ನು ಕರೆಯಮ್ಮಾ' ಎಂದಾಗ ಗಯ್ಯಾಳಿ ಗಾಬರಿಯಾಗಿ ಅಲ್ಲಿಂದ ಓಡಿದಳು!

**ಸಿ.ಆರ್. ಪುಷ್ಪ, ಬೆಂಗಳೂರು**

## ನೋಡ್ತಾ ಇದ್ದೇನೆ

ರಾತ್ರಿ ಹನ್ನೆರಡು ಗಂಟೆಯಾಗಿತ್ತು. ಪ್ರಿಯತಮೆಗೆ ಕರೆ ಮಾಡಿದ ಪ್ರಿಯಕರ ಕೇಳಿದ: 'ಏನು ಮಾಡ್ತಿದ್ದೀಯಾ ಹನಿ?'

'ಏನ್ ಮಾಡ್ಲಿ. ಇಲ್ಲಿವರೆಗೂ ಓದಿ ಓದಿ ಸಾಕಾಗಿ, ಮಲಗೋಣಾಂತ ಕಾಯ್ತಾ ಇದ್ನಾ... ಅಮ್ಮ ಕಾಲು ನೋವು ಅಂದಿದ್ದಕ್ಕೆ ಕಾಲು ಒತ್ತುತ್ತಿದ್ದೆ... ಹೌದೂ... ನೀನೇನು ಮಾಡ್ತಾ ಇದ್ದೀಯಾ ಸ್ವೀಟ್ ಹಾರ್ಟ್?!'

'ಕ್ಲಬ್ಬಿನಲ್ಲಿ ನೀನು ಮಧು ತೊಡೆ ಮೇಲೆ ಕುಳಿತು ಅವನಿಗೆ ಮುತ್ತು ಕೊಡ್ತಾ ಇದ್ದೆಯಲ್ಲ... ಅದನ್ನ ಬಿಟ್ಟ ಕಣ್ಣು ಬಿಡದಂತೆ ನೋಡ್ತಾ ನಿಂತಿದ್ದೇನೆ!'

**ರಾಮಪ್ರಸಾದ ಬಿ., ಹೊಸಪೇಟೆ**

